ಆಯಿತು. ನಿಮ್ಮ ಧಾರವಾಡ ಜಿಲ್ಲೆ ಮೂರು ಜಿಲ್ಲೆ ಆಗಿದೆ. ನಿಮ್ಮ ಧಾರವಾಡ ಜಿಲ್ಲೆಯಲ್ಲಿ 1998-99ನೇ ಸಾಲಿನಲ್ಲಿ ಏನು ಕಾರ್ಯಕ್ರಮ ಹಾಕಿಕೊಳ್ಳಬೇಕೋ ಅದನ್ನು ವ್ಯವಸ್ಥಿತವಾಗಿ ಮಾಡುತ್ತೇವೆ.

ಅಧ್ಯಕ್ಷರು : ಅವರು ಏನು ಕೇಳುತ್ತಾರೆ ಅಂದರೆ 1995-96ರಲ್ಲಿ ಗಿಡಗಳು ನೆಡುವ ಕಾರ್ಯ ಕಡಿಮೆ ಆಗಿದೆ. ಮತ್ತು ನೀವು ಅಲಾಟ್ ಮಾಡಿದ ಹಣ ಕೂಡ ಖರ್ಚಾಗಿಲ್ಲ. ಏತಕ್ಕೆ ಖರ್ಚು ಆಗಿಲ್ಲ ಎನ್ನುವುದು ಅವರ ಪ್ರಶ್ನೆ. ಈಗ 1995-96ರಲ್ಲಿ 598 ಲಕ್ಷ ರೂಪಾಯಿಗಳಲ್ಲಿ ಖರ್ಚಾಗಿರುವುದು 458 ಲಕ್ಷ. ಹೆಚ್ಚು ಕಡಿಮೆ 140 ಲಕ್ಷ ಖರ್ಚಾಗಿಲ್ಲ. ಏಕೆ ಉಳಿಯಿತು ಎನ್ನುವುದು ನಮ್ಮ ಪ್ರಶ್ನೆ.

ಶ್ರೀ ಡಿ. ಮಂಜುನಾಥ್ : ಅದಕ್ಕೆ ನಾನು ಹೇಳಿದೆ. ಸಸಿಗಳನ್ನು ನೆಡುವ ಏರಿಯಾ ಕಡಿಮೆಯಾಗುತ್ತಾ ಬಂದಿರುವುದರಿಂದ ಹಣ ಕೂಡ ಕಡಿಮೆ ಖರ್ಚಾಗಿದೆ. ನಿಮ್ಮ ಧಾರವಾಡ ಜಿಲ್ಲೆಗೆ ಸಂಬಂಧಪಟ್ಟ ಹಾಗೆ ನಾವು ಯೋಜನೆ ಹಾಕುತ್ತಿದ್ದೇವೆ.

ಶ್ರೀ ಜಗದೀಶ್ ಶೆಟ್ಟರ್ : 1995-96ರಲ್ಲಿ ಜಿಲ್ಲಾ ಒಂದೇ ಇತ್ತು. ಆಗ 140 ಲಕ್ಷ ರೂ. ಖರ್ಚಾಗಿಲ್ಲ.

ಅಧ್ಯಕ್ಷರು : ಕಡಿಮೆ ಆಗಿದೆ ಎಂದು ಅವರೇ ಒಪ್ಪಿಕೊಳ್ಳುತ್ತಾರೆ. ಅವರು ಒಪ್ಪಿಕೊಂಡೇ ಈ ಅಂಕಿಅಂಶಗಳನ್ನು ಕೊಟ್ಟಿರುವುದು.

ಶ್ರೀ ಜಗದೀಶ್ ಶೆಟ್ಟರ್ : 1998-99ನೇ ಸಾಲಿನಲ್ಲಿ ಯಾವ ಕೆಲಸ ಕೈಗೊಳ್ಳುತ್ತೀರಿ ಅಂದಾಗ ನಗರಪ್ರದೇಶದ ಹಸಿರೀಕರಣಕ್ಕೆ ಬರೀ ಐದು ಹೆಕ್ಟೇರ್ ಮಾತ್ರ ತೆಗೆದುಕೊಳ್ಳಲಾಗುವುದು ಎಂದು ಹೇಳಿದ್ದಾರೆ. ಇದು ಬಹಳ ಕಡಿಮೆ.

ಶ್ರೀ ಡಿ. ಮಂಜುನಾಥ್ : ಈಗ ಜಾಸ್ತಿ ತೆಗೆದುಕೊಳ್ಳುತ್ತೇವೆ. ಆ ಬಗ್ಗೆ ನಾನು ಅಧಿಕಾರಿಗಳಿಗೆ ಸೂಚನೆ ಕೊಡುತ್ತೇನೆ.

ವಿಜಾಪುರ ಜಿಲ್ಲೆಗೆ ನಬಾರ್ಡ್ ಆರ್ಥಿಕ ಸಹಾಯದಿಂದ ರಸ್ತೆಗಳ ಅಭಿವೃದ್ಧಿ

382 - ಶ್ರೀ ಬಸವನಗೌಡ ರಾ. ಪಾಟೀಲ್ (ವಿಜಾಪುರ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಿಜಾಪುರ ಜಿಲ್ಲೆಯ ಯಾವ ಯಾವ ರಸ್ತೆಗಳನ್ನು ನಬಾರ್ಡ್ ಆರ್ಥಿಕ ಸಹಾಯದಿಂದ ತೆಗೆದುಕೊಳ್ಳಲಾಗಿದೆ? (ವಿಧಾನಸಭಾವಾರು ವಿವರ ನೀಡುವುದು)

ಆ) ವಿಜಾಪುರದಿಂದ ಮಸಬನಾಳ ರಸ್ತೆ ತೀವ್ರ ಹದಗೆಟ್ಟಿದ್ದು (ಉಕ್ಕಲಿ ಮಾರ್ಗವಾಗಿ) ಬಸ್ಸುಗಳು ಹೋಗದ ರೀತಿಯಲ್ಲಿ ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) *ವಿಜಾಪುರ ಉಕ್ಕಲಿ ಮಾರ್ಗವಾಗಿ ಮುಸಬಿನಾಳಕ್ಕೆ ರಸ್ತೆ ಸರಿಯಿರದರಿಂದ ಅಲ್ಲಿನ ನಾಗರೀಕರಿಗೆ ಸುಮಾರು 21 ಕಿ.ಮೀ. ಸುತ್ತು ಹಾಕಿ ಹೋಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಈ) *ಈ ರಸ್ತೆಯನ್ನು ಸುಧಾರಿಸುವ ಹಾಗೂ ಡಾಂಬರೀಕರಣಗೊಳಿಸುವ ಕಾರ್ಯಕ್ರಮವನ್ನು ಈ ವರ್ಷದ ಅವಧಿಯಲ್ಲಿ ಸರ್ಕಾರವು ಕೈಗೊಳ್ಳಲಾಗುವುದೇ?*

ಶ್ರೀ ಸಿ. ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಅನುಬಂಧದಲ್ಲಿ ನೀಡಿದೆ.

ಆ) ಹೌದು ಮಳೆಗಾಲದಲ್ಲಿ ವಾಹನಗಳಿಗೆ ತೊಂದರೆಯಾಗುತ್ತದೆ.

ಇ) ಹೌದು.

ಈ) ಅನುದಾನದ ಲಭ್ಯತೆಯನ್ನು ಆಧಾರಿಸಿ ಹಂತಹಂತವಾಗಿ ಕೈಗೊಳ್ಳಲಾಗುವುದು.

ಎಲ್.ಎ. ಕ್ಯೂ 2425 ವಿಜಾಪುರ ಜಿಲ್ಲೆಯ ರಸ್ತೆ ಸುಧಾರಣೆಗಾಗಿ ನಬಾರ್ಡ್ ಸಹಾಯದಡಿ ತೆಗೆದುಕೊಳ್ಳಲಾದ ರಸ್ತೆಗಳು.

ಕ್ರ. ಸಂ.	ವಿಧಾನ ಸಭಾ ಕ್ಷೇತ್ರದ ಹೆಸರು	ರಸ್ತೆಯ ಹೆಸರು
1.	ತಿಕೋಟಾ	ಇಟ್ಟಂಗಿಹಾಳ ಲೋಹಗಾಂವ ಧನ್ನರಗಿ ರತ್ನಾಪೂರ ತಾಜಪೂರ ಧನ್ಯಾಳ ನಿಡೋಣಿ ರಸ್ತೆ.
2.	"	ಬಬಲೇಶ್ವರ ನಿಡೋಣಿ ಕುಮಠ ರಸ್ತೆ
3.	ಬಳ್ಳೋಳ್ಳ	ಇಂಡಿ ಚವಡಿಹಾಳ ಹಲಗುಣಕಿ ಮೂಲಕ ರಾ.ಹೆ. 13ರಕ್ಕೆ ಕೂಡು ರಸ್ತೆ
4.	"	ಚಡಚಣ ಹಾವಿನಾಳ ಹತ್ತಳ್ಳಿ ತದ್ದೇವಾಡಿ ಲೋಣಿ ಬಿ.ಕೆ. ಮೂಲ ಶಿರಡೋಣ ಲಿಂಗಸೂರ ರಸ್ತೆಗೆ ಕೂಡುವ ರಸ್ತೆ.
5.	ಇಂಡಿ	ಸಾಲೋಟಗಿ ಬೇಡಗಿ ರಸ್ತೆ.
6.	"	ಸಿಂದಗಿ ಅಡಮೇಲ ದೇವಣಗಾಂವ ರಸ್ತೆ ಕಿ.ಮಿ. 10.00 ರಿಂದ 36.00

ಕ್ರ. ಸಂ.	ವಿಧಾನ ಸಭಾ ಕ್ಷೇತ್ರದ ಹೆಸರು	ರಸ್ತೆಯ ಹೆಸರು
7.	ಸಿಂದಗಿ	ಸಿಂದಗಿ ಅಲಮೇಲ ದೇವಣಗಾಂವ ರಸ್ತೆ ಕಿ.ಮಿ. 0.00 ರಿಂದ 10.00
8.	"	ಬಂದಾಳ ಬೂದಿಹಾಳ ಓತಿಹಾಳ ರಸ್ತೆ
9.	"	ಸಿಂದಗಿ ಕಲಕೇರಿ ಅಸ್ಕಿ ರಸ್ತೆ
10.	ಬ.ಬಾಗೇವಾಡಿ	ಬಾಗೇವಾಡಿ ಮಸಬಿಬಾಳ ಡೋಣೂರ ರಸ್ತೆ ಮೇಲೆ ಡೋಡೂರ ಸಮೀಪ ಡೋಣ ನದಿಗೆ ಅಡ್ಡಲಾಗಿ ಸೇತುವೆ ನಿರ್ಮಾಣ.
11.	ಹೂ. ಹಿಪ್ಪರಗಿ	ಹುಲ್‌ಬೆಂಚಿ ನಾಗರಡಳ ಹುಲ್‌ಸೋಮನಾಳ ನಂದಾಹಾಳ ರಸ್ತೆ
12.	"	ಢವಳಗಿ ಮಿಣಜಗಿ ರಸ್ತೆ
13.	ಮುದ್ದೇಬಿಹಾಳ	ಕವಡಿಮಟ್ಟಿ ಡೊಂಕಮಡು ಕೂಡೆಕಲ ರಸ್ತೆ
14.	"	ತಾಳಿಕೋಟಿ ಗಡಿ ಸೋಮದಾಳ ಗೋಟಖಿಂಡರೆ ತುಂಬಗಿ ರಸ್ತೆ
15.	ಜಮಖಿಂಡಿ	ಮದರಖಿಂಡಿ ಕಲಹಳ್ಳಿ ಜಗದಾಳ ಸಾವಲಗಿ ಚಿಮ್ಮಡ ರಸ್ತೆ
16.	"	ಸಾವಳಗಿ ತುಂಗಳ ರಸ್ತೆ
17.	ಮುಧೋಳ	ಮುಧೋಳ ಕುಳಲ್ ನಾವಲಗಿ ರಸ್ತೆ
18.	"	ಉತ್ತೂರ ಒಂಟಿಗೋಡಿ ಮಿರ್ಜಿ ಮಲ್ಲಾಪೂರ ರಸ್ತೆ
19.	"	ಉತ್ತೂರ ಒಂಡಿಗೋಡಿ ಮಿರ್ಜಿ ಮಲ್ಲಾಪೂರ ರಸ್ತೆ ಕಿ.ಮಿ. 10 ರಲ್ಲಿ ಒಂಟಿಗೋಡಿ ಹಳ್ಳಕ್ಕೆ ಸೇತುವೆ ನಿರ್ಮಾಣ
20.	ಬಾಗಲಕೋಟೆ	ಕಿರಸೂರ ಭಗವತಿ ರಸ್ತೆ
21.	"	ಕಲಾದಗಿ ಕೆರಗಲಮಟ್ಟಿ ರಸ್ತೆ
22.	ಬೀಳಗಿ	ಸುನಗ ಜಾನಮಟ್ಟಿ ಅರಕೇರಿ ರಸ್ತೆ
23.	"	ತೊದಲಬಾಗಿ ಗೋಠೆ ಕೋಟ್ಯಾಳ ರಸ್ತೆ
24.	"	ತೆಲಸಂಗ ಸಾವಳಗಿ ರಸ್ತೆ
25.	ಹುನಗುಂದ	ರಾಯವಾಡಗಿ ಚಿಂತಕಮದಿನ್ನಿ ರಸ್ತೆ
26.	ಬದಾಮಿ	ಬನಶಂಕರಿ ಕುಟನಕೇರಿ ರಸ್ತೆ

ಕ್ರ. ಸಂ.	ವಿಧಾನ ಸಭಾ ಕ್ಷೇತ್ರದ ಹೆಸರು	ರಸ್ತೆಯ ಹೆಸರು
27.	"	ಶಿವಯೋಗಿ ಮಂದಿರ ಹತ್ತಿರ ಮಲಪ್ರಭಾ ನದಿಗೆ ಅಡ್ಡಲಾಗಿ ಸೇತುವೆ ನಿರ್ಮಾಣ.
28.	ಗುಳೇದಗುಡ್ಡ	ಅಂಬಲ್‌ಕೊಪ್ಪ ಚೌಡಾಪೂರ ರಸ್ತೆ
29.	"	ರಾಮಥಾಳ ಐಹೊಳೆ ಕೆಲೂರ ರಸ್ತೆ
30.	"	ಕಮತಗಿ ಕಡ್ಲಿಮಟ್ಟಿ ರಸ್ತೆ ಕಿ.ಮಿ. 2.00ರಲ್ಲಿ ಪಾಲತಿ ಹಳ್ಳಕ್ಕೆ ಸೇತುವೆ ನಿರ್ಮಾಣ.

ಶ್ರೀ ಬಸನಗೌಡ ರಾ. ಪಾಟೀಲ್ : ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ತಮ್ಮ ಉತ್ತರದಲ್ಲಿ ವಿಜಾಪುರ ಮತಕ್ಷೇತ್ರದಲ್ಲಿ ಬಹುಶಃ ನಬಾರ್ಡ್ ರಸ್ತೆಯನ್ನು ತೆಗೆದುಕೊಳ್ಳದೆ ನೆನಪು ಬಿಟ್ಟಿದ್ದಾರೋ ಎಂಬ ಅನುಮಾನವು ಅವರ ಉತ್ತರದಲ್ಲಿ ಬರುತ್ತದೆ. ವಿಜಾಪುರ ಜಿಲ್ಲೆಯ 14 ವಿಧಾನಸಭಾ ಕ್ಷೇತ್ರಗಳಲ್ಲಿ ನಬಾರ್ಡ್ ರಸ್ತೆಯನ್ನು ತೆಗೆದುಕೊಂಡಿದ್ದಾರೆ. ಆದರೆ ವಿಜಾಪುರ ಮತಕ್ಷೇತ್ರದಲ್ಲಿ ಒಂದು ರಸ್ತೆಯನ್ನೂ ತೆಗೆದುಕೊಂಡಿಲ್ಲ. ನಾನು ಎರಡು ರಸ್ತೆಗಳ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳಿಗೆ ಹೇಳಿದ್ದೆನು. ಆದರೆ, ಅದರ ಬಗ್ಗೆ ಸರಕಾರವು ಯಾವ ಕ್ರಮವನ್ನು ತೆಗೆದುಕೊಂಡಿದೆ ಎಂಬುದನ್ನು ಹೇಳಬೇಕು. ಎರಡನೇದಾಗಿ ವಿಜಾಪುರದಿಂದ ಉಕ್ಕಲಿ ಮಾರ್ಗವಾಗಿ ಮಸಬಿನಾಳ ಗ್ರಾಮಕ್ಕೆ, ಸುಮಾರು 15 ಸಾವಿರ ಜನಸಂಖ್ಯೆ ಇರತಕ್ಕಂಥ ಊರಿಗೆ ಹೋಗ ಬೇಕಾದರೆ ಸುಮಾರು 24 ಕಿ.ಮಿ. ಸುತ್ತು ಹಾಕಿ ಹೋಗತಕ್ಕಂಥ ಪರಿಸ್ಥಿತಿಯು ಇದೆ. ಅಲ್ಲಿ ಕೇವಲ ಮಳೆಗಾಲದಲ್ಲಿ ಮಾತ್ರವಲ್ಲ ಬೇಸಿಗೆಯಲ್ಲಿ ಕೂಡ ಹೋಗಲು ಜನರಿಗೆ ತೊಂದರೆಯಾಗುತ್ತಾ ಇದೆ. ಆದ್ದರಿಂದ ದಯವಿಟ್ಟು ಈ ರಸ್ತೆಯ ಕೆಲಸವನ್ನು ಯಾವಾಗ ಪ್ರಾರಂಭ ಮಾಡುತ್ತೀರಿ ಎಂಬುದನ್ನು ಹೇಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಸಿ.ಎಂ. ಉದಾಸಿ : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಬಿಜಾಪುರ ಜಿಲ್ಲೆಯ ಎಲ್ಲಾ ಕ್ಷೇತ್ರಗಳಿಗೂ ನಬಾರ್ಡ್ ರಸ್ತೆಯನ್ನು ಕೊಟ್ಟು ತನ್ನ ಕ್ಷೇತ್ರಕ್ಕೆ ಮಾತ್ರ ಕೊಟ್ಟಿಲ್ಲ ಎಂಬ ಭಾವನೆಯನ್ನು ವ್ಯಕ್ತಪಡಿಸಿದ್ದಾರೆ. ಇದನ್ನು ಪರಿಶೀಲಿಸಿ ನೋಡಿದಾಗ ಮೊದಲು ವಿಜಾಪುರ ಕ್ಷೇತ್ರವು ಕೇವಲ ಕಟ್ಟಡಕಾಮಗಾರಿಗಳಿಗೆ ಮಾತ್ರ ಸೀಮಿತವಾಗಿತ್ತು ಎಂದು ಭಾವಿಸಿದ್ದರೂ, ಈಗ ನೋಡಿದಾಗ ಕೆಲವು ಹಳ್ಳಿಗಳು ಕೂಡ ಅವರ ವಿಧಾನಸಭಾ ಕ್ಷೇತ್ರದಲ್ಲಿ ಬರುತ್ತವೆ ಎಂದು ತಿಳಿದಾದ ಮೇಲೆ ಅದನ್ನು ಮರುಪರಿಶೀಲನೆ ಮಾಡಿ ಆ ರಸ್ತೆಗಳನ್ನು ತೆಗೆದುಕೊಳ್ಳುತ್ತೇವೆ ಎಂಬ ಭರವಸೆಯನ್ನು ನಾನು ಅವರಿಗೆ ಈಗಾಗಲೇ ಕೊಟ್ಟಿದ್ದೇನೆ. ವಿಜಾಪುರ ಜಿಲ್ಲೆಗೆ ಸುಮಾರು 20 ಕೋಟಿ ರೂ.ಗಳಷ್ಟು ಹಣವನ್ನು ಖರ್ಚು ಮಾಡಿ ಆರ್‌ಎಡಿಎಫ್‌ನಲ್ಲಿ 2 ಮತ್ತು 3 ರಲ್ಲಿ ಸುಮಾರು 30 ಲಕ್ಷ ರೂ.ಗಳನ್ನು ಖರ್ಚು ಮಾಡಲು ನಬಾರ್ಡ್‌ನಲ್ಲಿ ತೆಗೆದುಕೊಂಡಿದ್ದೇವೆ. ಮಾನ್ಯ ಸದಸ್ಯರು ಹೇಳುವ ರಸ್ತೆಯು ಬೇಸಿಗೆ ಕಾಲದಲ್ಲಿ ಬಸ್‌ಗಳು ಓಡಾಡಲು ಸಮರ್ಥವಾಗಿವೆ. ಮಳೆಗಾಲದಲ್ಲಿ ಮಾತ್ರ ಸ್ವಲ್ಪ

ಸಮಸ್ಯೆಯಾಗುತ್ತದೆ ಎಂದು ಅವರ ಗಮನಕ್ಕೆ ತಂದಿದ್ದೇನೆ. ಇದನ್ನು ಆರ್‌ಎಡಿಎಫ್- 4ರಲ್ಲಿ ತೆಗೆದುಕೊಳ್ಳುವ ಬಗ್ಗೆ ಗಮನಿಸುತ್ತೇನೆ ಎಂದು ಹೇಳಬಯಸುತ್ತೇನೆ.

ಶ್ರೀ ಬಸವನಗೌಡ ರಾ. ಪಾಟೀಲ್ : ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಹೇಳಿದ ಹಾಗೆ ಅದು ಬೇಸಿಗೆಯಲ್ಲಿ ಉಪಯುಕ್ತವಾಗುತ್ತದೆ. ಆದರೆ ಅವರು ಕೆಎಸ್‌ಆರ್‌ಟಿಸಿ ಯವರ ವರದಿಯನ್ನು ತರಿಸಿಕೊಂಡರೆ ಅರ್ಥವಾಗುತ್ತದೆ. ಅಲ್ಲಿನ ರಸ್ತೆಯಲ್ಲಿ ಬೇಸಿಗೆಯಲ್ಲಿ ಕೂಡ ಬಸ್‌ಗಳು ಸರಿಯಾಗಿ ಓಡಾಡುತ್ತಾ ಇಲ್ಲ. ಆ ಪ್ರದೇಶದಲ್ಲಿರತಕ್ಕಂಥ, ಸುಮಾರು 15 ಸಾವಿರ ಜನಸಂಖ್ಯೆಯುಳ್ಳ ಮಸಿಗನಾಳ ಗ್ರಾಮ ಮತ್ತು ಸುತ್ತುಮುತ್ತಲಿನ ಗ್ರಾಮಗಳಿಗೆ ಜನರು ಹೋಗಬೇಕಾದರೆ ಬಸವನ ಬಾಗೇವಾಡಿಯ ಮೂಲಕ ಸುಮಾರು 21 ಕಿ.ಮಿ.ಗಳಷ್ಟು ಸುತ್ತು ಹಾಕಿ ಹೋಗಬೇಕಾಗುತ್ತದೆ. ಆದ್ದರಿಂದ ದಯವಿಟ್ಟು ಸರಕಾರದವರು ಇದನ್ನು ಗಂಭೀರವಾಗಿ ಪರಿಗಣಿಸಬೇಕೆಂದು ಕೇಳಿಕೊಳ್ಳುತ್ತೇನೆ. ಹಾಗೆಯೇ ನಬಾರ್ಡ್‌ನಲ್ಲಿ ನಾನು ಕೊಟ್ಟಂಥ ಎರಡು ರಸ್ತೆಗಳನ್ನು ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಸಿ.ಎಂ. ಉದಾಸಿ : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಹೇಳಿದ ವಿಚಾರವನ್ನು ಪರಿಶೀಲಿಸಿ ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತೇನೆ.

ತುಮಕೂರು ಜಿಲ್ಲೆಯಲ್ಲಿ ಅರಣ್ಯ ಒತ್ತುವರಿ ಸಾಗುವಳಿ ಮಾಡುತ್ತಿರುವ ಬಗರ್‌ಹುಕಂ ಸಾಗುವಳಿದಾರರನ್ನು ಒಕ್ಕಲೆಬ್ಬಿಸುವುದು

383 - ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ) : ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುಮಕೂರು ಜಿಲ್ಲೆಯಲ್ಲಿ ಅರಣ್ಯ ಇಲಾಖೆಯು ಹಲವಾರು ವರ್ಷಗಳಿಂದ ಅರಣ್ಯ ಒತ್ತುವರಿ ಸಾಗುವಳಿ ಮಾಡುತ್ತಿರುವ ಬಗರ್‌ಹುಕುಂದಾರರನ್ನು ಒಕ್ಕಲೆಬ್ಬಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಅದನ್ನು ತಡೆಯಲು ಸರ್ಕಾರ ಯಾವ ಕ್ರಮ ಕೈಗೊಳ್ಳುವುದು?

ಶ್ರೀ ಡಿ. ಮಂಜುನಾಥ್ (ಅರಣ್ಯ ಸಚಿವರು) :

ಅ) ಬಂದಿದೆ.

ದಿನಾಂಕ 27-4-78ರ ನಂತರದ ಅತಿಕ್ರಮಣವನ್ನು ಸರ್ಕಾರದ ಆದೇಶ ಸಂಖ್ಯೆ : ಅಪಜೀ 5. ಎಫ್‌ಜಿಎಲ್ 90, ದಿನಾಂಕ 5-5-1997ರ ಪ್ರಕಾರ ಖುಲ್ಲಾ ಪಡಿಸಲಾಗುತ್ತಿದೆ.

ಆ) ತಡೆಯುವ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಟಿ.ಬಿ. ಜಯಚಂದ್ರ : ಮಾನ್ಯ ಅಧ್ಯಕ್ಷರೇ, ತುಮಕೂರು ಜಿಲ್ಲೆಯಲ್ಲಿ ಅರಣ್ಯ ಇಲಾಖೆಯವರು ಹಲವಾರು ವರ್ಷಗಳಿಂದ ಸಾಗುವಳಿ ಮಾಡಿಕೊಂಡು ಬಂದಿದ್ದವರನ್ನು ಒಕ್ಕಲು